ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಗುರುಪೂರ್ಣಿಮಾ

## ಬೆಳದಿಂಗಳ ಸಂಗೀತ 294

**29 ಜುಲೈ 2026 * ಬುಧವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಉಪನ್ಯಾಸ



ಶ್ರೀ ಐತಿಚಂಡ ರಮೇಶ್ ಉತ್ತಪ್ಪ

ಕೊಳಲು ವಾದನ



ವಿದ್ವಾನ್ ಕೃಷ್ಣ ಪವನ್‌ಕುಮಾರ್



ವಿದ್ವಾನ್ ಕೇಶವ್ ಮೋಹನ್‌ಕುಮಾರ್
ವಯೊಲಿನ್



ವಿದ್ವಾನ್ ಸುನಾದಕೃಷ್ಣ ಅಮ್ಮಾಯಿ
ಮೃದಂಗ



ವಿದ್ವಾನ್ ಎಸ್. ಮಂಜುನಾಥ್
ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ಶ್ರೀ ಐತಿಚಂಡ ರಮೇಶ್ ಉತ್ತಪ್ಪನವರು** 'ವಿಜಯ ಕರ್ನಾಟಕ' ದಿನಪತ್ರಿಕೆಯ ಮೈಸೂರು ಆವೃತ್ತಿಯ ಸ್ಥಾನಿಕ ಸಂಪಾದಕರು. ಜಾನಪದ ಹಾಗೂ ಇತಿಹಾಸದಲ್ಲಿ ಎಂಎ ಪದವೀಧರರು. ಸಾಹಿತ್ಯ, ಪತ್ರಿಕೋದ್ಯಮ, ರಂಗಭೂಮಿ, ಪರಿಸರ, ಸಿನಿಮಾ, ಆಕಾಶವಾಣಿ – ಇವು ಇವರ ಆಸಕ್ತಿಯ ಕ್ಷೇತ್ರಗಳು. 'ಮೈಸೂರು ಗಲ್ಲಿ ಕಥೆ' ಹಾಗೂ 'ವೃತ್ತಗಳ ವೃತ್ತಾಂತ' ಮೊದಲಾದ 41ಕ್ಕೂ ಹೆಚ್ಚು ವಿದ್ವತ್‌ಪೂರ್ಣ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯವನ್ನು ಕುರಿತಂತೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯೊಬ್ಬರು ಪಿಎಚ್‌ಡಿ ಅಧ್ಯಯನ ನಡೆಸುತ್ತಿರುವುದು ವಿಶೇಷ. ಇವರ 'ಯುದ್ಧ ಹಾಗೂ ಕೊಡಗಿನ ಮಹಾವೀರ' ಕೃತಿಯನ್ನು ಆಧರಿಸಿ ಹಿಂದಿಯಲ್ಲಿ 'ಸ್ಕೈಫೋರ್ಸ್' ಹೆಸರಿನ ಸಿನಿಮಾ ನಿರ್ಮಾಣವಾಗಿದೆ. ಟಿವಿ, ಯೂಟ್ಯೂಬ್‌ಗಳ ಮೂಲಕ ಹಲವಾರು ಬೋಧಪ್ರದ ಕಾರ್ಯಕ್ರಮಗಳನ್ನು ಪ್ರಸ್ತುತಿ ಪಡಿಸುತ್ತಿದ್ದಾರೆ. ಹಲವಾರು ವಿಚಾರಗೋಷ್ಠಿಗಳಲ್ಲಿ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇವರಿಗೆ ಮೈಸೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ 20ಕ್ಕೂ ಹೆಚ್ಚು ಪ್ರಶಸ್ತಿಗಳು ಲಭಿಸಿವೆ.

**ವಿದ್ವಾನ್ ಕೃಷ್ಣ ಪವನ್‌ಕುಮಾರ್‌ರವರು** ಭರವಸೆಯ ಯುವ ಸಂಗೀತಗಾರರು. ಎಂ.ಟೆಕ್. ಪದವೀಧರರು. ಮಂಗಳೂರಿನ ಇನ್‌ಫೋಸಿಸ್ ಘಟಕದಲ್ಲಿ ಉದ್ಯೋಗಿಗಳು. ಹಾಡುಗಾರಿಕೆಯಲ್ಲದೆ ಕೊಳಲು ಮತ್ತು ಮೃದಂಗ ವಾದನದಲ್ಲಿಯೂ ಪ್ರಭುತ್ವ ಹೊಂದಿದ್ದಾರೆ. ಸಂಗೀತ ಶಿಕ್ಷಣವನ್ನು ವಿದುಷಿ ಸತ್ಯವತಿ, ವಿದುಷಿ ರಾಜರಾಜೇಶ್ವರಿ ಭಟ್, ಅನಂತರ ವಿದ್ವಾನ್ ಜೆ. ವೆಂಕಟರಾಮನ್‌ರವರಲ್ಲಿ ಕಲಿತರು. ವಿದ್ವಾನ್ ಎನ್. ಗೋಪಾಲಕೃಷ್ಣ ಅಯ್ಯರ್ ಮತ್ತು ವಿದ್ವಾನ್ ಕೆ.ಎಚ್. ರವಿಕುಮಾರ್ ರವರುಗಳು ಕೊಳಲು ಮತ್ತು ಮೃದಂಗ ವಾದನದ ಗುರುಗಳು. ಸುಮಾರು 1,000 ಕ್ಕೂ ಹೆಚ್ಚು ದಾಸರ ಪದಗಳಿಗೆ ಸಂಗೀತ ಸಂಯೋಜನೆ ಮಾಡಿರುವ ಹಿರಿಮೆ ಇವರದು. ಕರ್ನಾಟಕ ಸರ್ಕಾರ ನಡೆಸುವ

ಹಾಡುಗಾರಿಕೆ, ಕೊಳಲು, ಮೃದಂಗ ಪರೀಕ್ಷೆಗಳಲ್ಲಿ ರ್‍ಯಾಂಕ್ ಗಳಿಸಿದ್ದಾರೆ. ಅಖಿಲ ಭಾರತ ಆಕಾಶವಾಣಿಯ ಹಾಡುಗಾರಿಕೆಯಲ್ಲಿ ಮತ್ತು ಕೊಳಲು ವಾದನದಲ್ಲಿ 'ಎ' ಶ್ರೇಣಿ ಹಾಗೂ ಮೃದಂಗವಾದನದಲ್ಲಿ 'ಬಿ' ಶ್ರೇಣಿ ಪಡೆದಿರುವ ಪ್ರತಿಭಾವಂತರು. ಮಂಗಳೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಉಡುಪಿ ಶ್ರೀ ಕೃಷ್ಣಮಠದ 'ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ', ನಾದಕಿಶೋರೋತ್ಸವದಲ್ಲಿ ಬಹುಮಾನ, ಅಖಿಲ ಭಾರತ ಆಕಾಶವಾಣಿ ಪ್ರಶಸ್ತಿ, ರಾಗ ತಾಳ ಪಲ್ಲವಿ ಪ್ರಶಸ್ತಿ ಮೊದಲಾದ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ವಿದ್ವಾನ್ ಕೇಶವ ಮೋಹನ್‌ಕುಮಾರ್‌ರವರು** ಹಿರಿಯ ವಯೊಲಿನ್ ಕಲಾವಿದರಾದ ವಿದ್ವಾನ್ ಎಚ್.ಕೆ. ನರಸಿಂಹಮೂರ್ತಿಯವರ ಶಿಷ್ಯರು. ಆಕಾಶವಾಣಿ ಹಾಗೂ ದೂರದರ್ಶನಗಳ ವಯೊಲಿನ್ ವಾದನದ 'ಎ' ಶ್ರೇಣಿ ಕಲಾವಿದರು. ಎಂ.ಎಸ್. ಸುಬ್ಬಲಕ್ಷ್ಮಿ ಫೆಲೋಶಿಪ್‌ಗೆ ಭಾಜನರು. ಪ್ರಧಾನ ಕಲಾವಿದರಾಗಿ ಹಾಗೂ ಸಾಥೀದಾರರಾಗಿ ದೇಶ ವಿದೇಶಗಳಲ್ಲಿ ಪ್ರತಿಷ್ಠಿತ ಸಂಗೀತಸಭೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

**ವಿದ್ವಾನ್ ಸುನಾದ ಕೃಷ್ಣ ಅಮ್ಮಾಯಿಯವರು** ವಿದ್ವಾನ್ ತ್ರಿಚ್ಚಿ ಕೆ.ಆರ್. ಕುಮಾರ್ ಹಾಗೂ ಕಲೈಮಾಮಣಿ ವಿದ್ವಾನ್ ಮನ್ನಾರ್‌ಗುಡಿ ಎ. ಈಶ್ವರನ್‌ರವರುಗಳ ಶಿಷ್ಯರು. ಆಕಾಶವಾಣಿ ಮತ್ತು ದೂರದರ್ಶನದ 'ಎ' ಶ್ರೇಣಿ ಕಲಾವಿದರು. ಚೆನ್ನೈನ 'ಮುದ್ರಾ'ದಿಂದ 'ಸಂಗೀತಮುದ್ರಾ' ಪ್ರಶಸ್ತಿ, ಶ್ರೀ ಷಣ್ಮುಗಾನಂದ ಫೈನ್ ಆರ್ಟ್ಸ್ ಸಂಸ್ಥೆಯಿಂದ ಎಂ.ಎಸ್. ಸುಬ್ಬಲಕ್ಷ್ಮಿ ಫೆಲೋಷಿಪ್ ಪಡೆದಿದ್ದಾರೆ.

**ವಿದ್ವಾನ್ ಎಸ್. ಮಂಜುನಾಥ್‌ರವರು** ವಿದ್ವಾನ್ ಟಿ.ವಿ. ಭದ್ರಾಚಾರ್ ಮತ್ತು ವಿದ್ವಾನ್ ತುಮಕೂರು ಬಿ. ರವಿಶಂಕರ್‌ರವರ ಬಳಿ ಕ್ರಮವಾಗಿ ಘಟಂ ಮತ್ತು ಮೃದಂಗ ವಾದನವನ್ನು ಕಲಿತಿದ್ದಾರೆ. ಹಲವಾರು ಸಿ.ಡಿ.ಗಳಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಜೆಎಸ್‌ಎಸ್ ಸಂಸ್ಥೆಯ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಬೆಳದಿಂಗಳ ಸಂಗೀತ 295

**28 ಆಗಸ್ಟ್ 2026**




**ಗಿಟಾರ್ ವಾದನ**

**ವಿದ್ವಾನ್ ಎನ್. ಅಭಯ್ ನಯಂಪಲ್ಲಿ**

**ವಯೊಲಿನ್**

**ವಿದ್ವಾನ್ ಜನಾರ್ಧನ್ ಶ್ರೀನಾಥ್**





**ಮೃದಂಗ**

**ವಿದ್ವಾನ್ ವಿಜಯ ನಟೇಶನ್**

**ಘಟಂ**

**ವಿದ್ವಾನ್ ಶಮಿತ್ ಎಸ್. ಗೌಡ**



**ಫೋನ್: 0821–2548221, 2548223 * ಇಮೇಲ್: sutturmath@jssonline.org**